

# ಬಾಂಗ್ಲಾದೇಶಕ್ಕೆ ಮರಳಿದ ತಾರಿಕ್

■ ರಾಹುಲ ಬೆಳಗಲಿ

ಸದ್ಯಕ್ಕೆ ಪ್ರವಾಸ ಅಥವಾ ಬೇರೆ ನೆಪಕ್ಕೆ ಬಾಂಗ್ಲಾದೇಶಕ್ಕೆ ಹೋಗುವುದಿರಲಿ, ಅಲ್ಲಿನ ಪರಿಸ್ಥಿತಿ ಕುರಿತು ಕಲ್ಪನೆ ಕೂಡ ಮಾಡಲು ಆಗುವುದಿಲ್ಲ. ಅಲ್ಲಿನ ಅನಿಶ್ಚಿತತೆ, ರಾಜಕೀಯ ಅಸ್ಥಿರತೆ ಮತ್ತು ಅರಾಜಕತೆ ಎಲ್ಲವೂ ಆತಂಕ ಮೂಡಿಸುತ್ತವೆ. ದಿನಗಳು ಕಳೆದಂತೆ ಅನಿರೀಕ್ಷಿತ ಬೆಳವಣಿಗೆಗಳು ಆಗುತ್ತಿವೆ. ಇದೆಲ್ಲದರ ಮಧ್ಯೆ 17 ವರ್ಷಗಳಾದ ಬಳಿಕ ಲಂಡನ್‌ನಿಂದ ಬಾಂಗ್ಲಾದೇಶ ನ್ಯಾಷನಲ್ ಪಾರ್ಟಿಯ (ಬಿಎನ್‌ಪಿ) ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ ಸ್ವದೇಶಕ್ಕೆ ಮರಳಿದ್ದಾರೆ.

ಸ್ವಯಂ–ಗಡಿ ಪಾರಾಗಿ ಲಂಡನ್‌ನಲ್ಲಿ ನೆಲೆಸಿದ್ದ ತಾರಿಕ್ ರೆಹಮಾನ್ ಬಾಂಗ್ಲಾದೇಶದ ರಾಜಧಾನಿ ಢಾಕಾಗೆ ಮರಳಿದ್ದು ಸಂಚಲನ ಮೂಡಿಸಿದೆ. ಅವರ ಆಗಮನವನ್ನು ಒಂದರ್ಥದಲ್ಲಿ ಆಶಾಕಿರಣವೆಂದೇ ಭಾವಿಸಿರುವ ಅಲ್ಲಿನ ಯುವಜನರು ಅದ್ದೂರಿ ಸ್ವಾಗತ ನೀಡಿದ್ದಾರೆ. ಲಕ್ಷಾಂತರ ಸಂಖ್ಯೆಯಲ್ಲಿ ಜಮಾಯಿಸಿ, 'ದೇಶಕ್ಕೆ ಮತ್ತು ಜನರಿಗೆ ಹಿತಕರ ಭಾವ ಮೂಡಿಸುವ ಬದಲಾವಣೆಯ ಗಾಳಿ ಬೀಸುವುದಾದರೆ, ಅದು ನಿಮ್ಮಿಂದ' ಎಂಬ ನಿರೀಕ್ಷೆಯನ್ನು ಸಾಂಕೇತಿಕವಾಗಿ ವ್ಯಕ್ತಪಡಿಸಿದ್ದಾರೆ.

ಬಾಂಗ್ಲಾದೇಶದ ಆರನೇ ಅಧ್ಯಕ್ಷ ಜಿಯಾ ಉರ್ ರೆಹಮಾನ್ ಮತ್ತು ಮಾಜಿ ಪ್ರಧಾನಿ ಖಾಲಿದಾ ಜಿಯಾ ಅವರ ಪುತ್ರ ಆಗಿರುವ ತಾರಿಕ್ ತಮ್ಮ ಮೊದಲ ಭಾಷಣದಲ್ಲಿಯೇ, 'ಇದು ನನ್ನ ಮತ್ತು ನಿಮ್ಮೆಲ್ಲರ ದೇಶ. ಬೇರೆ ಬೇರೆ ಕಾರಣಗಳಿಂದ ಹಿನ್ನಡೆ ಅನುಭವಿಸುತ್ತಿರುವ ದೇಶವನ್ನು ರಕ್ಷಿಸಬೇಕಿದೆ. ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಬದಲಾವಣೆ ತಂದು, ಎಲ್ಲರಲ್ಲೂ ಸುರಕ್ಷತಾ ಭಾವ ಮೂಡಿಸಬೇಕಿದೆ. ಸುಭದ್ರ ತಳಹದಿಯ ಮೇಲೆ ದೇಶವನ್ನು ಕಟ್ಟಬೇಕಿದೆ. ಈ ದೇಶವು ಒಂದೇ ಜಾತಿ ಅಥವಾ ಧರ್ಮಕ್ಕೆ ಸೇರಿದ್ದಲ್ಲ. ಇಲ್ಲಿ ಸರ್ವಧರ್ಮೀಯರು ನೆಮ್ಮದಿಯಿಂದ ಬದುಕಬೇಕು' ಎಂದಿದ್ದಾರೆ.

ತಾರಿಕ್ ರೆಹಮಾನ್ ಅವರ ಮನವಿಯ ಹಿಂದೆ ಸ್ಪಷ್ಟ ಕಾರಣವಿದೆ. ಬಾಂಗ್ಲಾದೇಶವು ಸ್ವಾತಂತ್ರ್ಯ ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬರುವ ಮುನ್ನ ಹಲವು ಏಳುಬೀಳುಗಳನ್ನು ಕಂಡಿದೆ. ಪಾಕಿಸ್ತಾನದ ದುರಾಡಳಿತದಿಂದ ನಲುಗುತ್ತಿದ್ದ ಬಾಂಗ್ಲಾದೇಶವು ನಿರಂತರ ಹೋರಾಟ ನಡೆಸಿತು. 1971ರ ಮಾರ್ಚ್ 26ರಂದು ಸ್ವಾತಂತ್ರ್ಯ ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬಂತು. ಆದರೆ, ವಿಮೋಚನಾ ಹೋರಾಟದ ಭಾಗವಾಗಿ, ಪಾಕಿಸ್ತಾನದ ಸೇನೆ ವಿರುದ್ಧ ಒಂಬತ್ತು ತಿಂಗಳು ಯುದ್ಧ ಮಾಡಬೇಕಾಯಿತು. ಭಾರತೀಯ ಸೇನೆಯ ನೆರವಿನೊಂದಿಗೆ ಮುಕ್ತವಾಹಿನಿ (ಬಾಂಗ್ಲಾದೇಶ ಸ್ವಾತಂತ್ರ್ಯ ಹೋರಾಟಗಾರರ ಸಂಘಟನೆ) ನಿರಂತರ ಸಂಘರ್ಷ ನಡೆಸಿದ್ದರಿಂದ ಪಾಕಿಸ್ತಾನ ಸೇನೆ 1971ರ ಡಿಸೆಂಬರ್ 16ರಂದು ಶರಣಾಯಿತು. ಅದು ಬಾಂಗ್ಲಾ ಪಾಲಿಗೆ ವಿಜಯ ದಿವಸ. ವಿಮೋಚನಾ ಹೋರಾಟದ ಸಂದರ್ಭದಲ್ಲಿ ತಾರಿಕ್ ಸೇರಿ ಇಡೀ ಕುಟುಂಬವು ದೌರ್ಜನ್ಯಕ್ಕೆ ಒಳಗಾಯಿತು. ಆಗಿನ ದಿನಗಳ ಕಹಿ ನೆನಪು ತಾರಿಕ್ ಮನದಲ್ಲಿ ಇನ್ನೂ ಹಸಿರಾಗಿವೆ.

ಶಾಲಾ ಮತ್ತು ಸ್ನಾತಕೋತ್ತರ ಶಿಕ್ಷಣವನ್ನು ಢಾಕಾದಲ್ಲೇ ಪೂರೈಸಿದ ತಾರಿಕ್ ರೆಹಮಾನ್, ಯೌವನದ ದಿನಗಳಿಂದಲೇ ರಾಜಕೀಯ ಕ್ಷೇತ್ರದ ಬಗ್ಗೆ ಆಸಕ್ತಿ ತಳೆದರು. ರಾಜಕೀಯ ಶಾಸ್ತ್ರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಬಗ್ಗೆ ಹೆಚ್ಚು ಓದಿಕೊಂಡ ಅವರು ರಾಜಕೀಯ ಚಿಂತಕರ ವಿಚಾರಗಳನ್ನು ಅರಿಯಲು ಪ್ರಯತ್ನಿಸಿದರು. 1980ರ ದಶಕದಲ್ಲಿ ಸರ್ವಾಧಿಕಾರಿ ಮಾದರಿಯಲ್ಲಿ ಆಡಳಿತ ನಡೆಸಿದ ಹುಸೇನ್ ಮಹಮ್ಮದ್ ಇರ್ಷಾದ್ ವಿರುದ್ಧ ಹೋರಾಟಕ್ಕೆ ಇಳಿದರು. ಸೇನಾಧಿಕಾರಿ ಆಗಿದ್ದ ಇರ್ಷಾದ್ 1982ರಲ್ಲಿ ಆಗಿನ ಅಧ್ಯಕ್ಷ ಅಬ್ದುಲ್ ಸತ್ತಾರ್ ಅವರನ್ನು ಪದಚ್ಯುತಗೊಳಿಸಿ, 1983ರಲ್ಲಿ ಸ್ವಯಂ ಅಧ್ಯಕ್ಷರಾಗಿ ಘೋಷಿಸಿಕೊಂಡರು. ನಂತರದ ವರ್ಷಗಳಲ್ಲಿ ಬಾಂಗ್ಲಾದೇಶದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು. ಅವರ ಸರ್ಕಾರ ಉರುಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ತಾರಿಕ್ ಬೇರೆ ಬೇರೆ ಸ್ವರೂಪದ ಹೋರಾಟ ಮಾಡಿದರು. 1991ರಲ್ಲಿ ಅವರ ತಾಯಿ ಖಾಲಿದಾ ಜಿಯಾ ಅವರು ದೇಶದ ಮೊದಲ ಮಹಿಳಾ ಪ್ರಧಾನಿ ಆಗಿ ಆಯ್ಕೆ ಆಗುವಲ್ಲಿ ಮುಖ್ಯ ಪಾತ್ರ ವಹಿಸಿದರು.

ಬದಲಾದ ರಾಜಕೀಯ ಸನ್ನಿವೇಶದಲ್ಲಿ 2007ರಲ್ಲಿ ದೇಶದಲ್ಲಿ ಶೇಖ್ ಹಸೀನಾ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ತಾರಿಕ್ ರೆಹಮಾನ್ ಹಿನ್ನಡೆ ಅನುಭವಿಸಿದರು. ಭ್ರಷ್ಟಾಚಾರ, ಅಕ್ರಮ ಸಂಪತ್ತು ಗಳಿಕೆ, ಬಾಂಬ್ ಸ್ಫೋಟ ಆರೋಪದ ಮೇಲೆ ಅವರ ವಿರುದ್ಧ ಒಟ್ಟು 84 ಪ್ರಕರಣಗಳು ದಾಖಲಾದವು. ಜೈಲು ಶಿಕ್ಷೆಗೆ ಗುರಿಯಾದರು. ಆದರೆ, ವೈದ್ಯಕೀಯ ಚಿಕಿತ್ಸೆಗೆ ಅನುಮತಿ ಕೋರಿ 2008ರಲ್ಲಿ ಲಂಡನ್‌ಗೆ ತೆರಳಿದ ಅವರು, ವಾಪಸ್ ಬಂದಿದ್ದು 2025ರ ಡಿಸೆಂಬರ್ 25ರಂದು. ಅವರು ಸದ್ಯ ಎಲ್ಲಾ ಪ್ರಕರಣಗಳಿಂದ ಖುಲಾಸೆಗೊಂಡಿದ್ದಾರೆ. ತಾರಿಕ್ ರೆಹಮಾನ್ ಅವರ ಪತ್ನಿ ಡಾ. ಜುಬೇದಾ ರೆಹಮಾನ್ ಹೃದ್ರೋಗ ತಜ್ಞೆ. ಅವರಿಬ್ಬರಿಗೆ ಪುತ್ರಿ ಇದ್ದಾಳೆ.

ಈ ವರ್ಷ ಫೆಬ್ರುವರಿಯಲ್ಲಿ ಬಾಂಗ್ಲಾದೇಶ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ದೇಶದ ಪ್ರಧಾನಿ ಆಗುವ ಆಕಾಂಕ್ಷೆಯಲ್ಲಿ ಇರುವ ತಾರಿಕ್ ಅವರು ಜನರ ಮನ್ನಣೆ ಗಳಿಸಲು ಪ್ರಯತ್ನ ನಡೆಸಿದ್ದಾರೆ. ಆಶಾಭಾವ ನನಸಾಗುವುದೇ ಅಥವಾ ಅರಾಜಕತೆ ಪ್ರಭಾವ ಬೀರುವುದೇ ಎಂಬುದು ಚುನಾವಣೆ ಫಲಿತಾಂಶದ ಮೇಲೆ ಅವಲಂಬಿಸಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65